ಸಾಕ್ಷಿಯನ್ನು ದಿನಾಂಕ **14.11-2022** ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಶ್ರೀ ಟಿ ಎನ್ ಎಸ್ ವಕೀಲರಿಂದಃ

ಸ.ನಂ.172 ಮುಂಗಾನಹಳ್ಳಿ ಗ್ರಾಮಕ್ಕೆ ಸೇರಿದ್ದು ಎಂದರೆ ಸರಿ. ಸೀತಮ್ಮಪಲ್ಲಿ ಗ್ರಾಮ ಮಜರಗ್ರಾಮ ಎಂದರೆ ಸರಿ. ಮಜರಗ್ರಾಮಕ್ಕೆ ಸೇರಿದ ಜಮೀನುಗಳು ಇರುತ್ತವೆ, ದಾಖಲೆಗಳು ಬೇರೆ ಪಂಚಾಯತಿಯಲ್ಲಿ ಇರುತ್ತವೆ. ಜಮೀನಿನ ಸ.ನಂ.ಗಳ ದಾಖಲೆಗಳು ಪಂಚಾಯತಿಗೆ ಯಾವ ಕಾರಣಕ್ಕೆ ಹೋಗುತ್ತವೆ ಎಂದರೆ ಸಾಕ್ಷಿ ಸ.ನಂ.ನ ದಾಖಲೆಗೆ update ಆಗದ ಕಾರಣ ಸರ್ಕಾರದ ಅನುಮತಿ ಪಡೆದು ಮಜರಗ್ರಾಮ ಸಾಮಾನ್ಯವಾಗಿ ಅಧಿಕೃತ ದಾಖಲೆ ಆಗಿರುತ್ತದೆ ಆದ್ದರಿಂದ ಬೇರೆ ಗ್ರಾಮಕ್ಕೆ ಸೇರುತ್ತದೆ ಎಂದು ನುಡಿಯುತ್ತಾರೆ.

2. ಸ.ನಂ. ದಾಖಲೆಗಳು ಪಂಚಾಯತಿಗೆ ಸೇರುವುದಿಲ್ಲ ಎಂದರೆ ಸರಿ. ಕಂದಾಯ ಇಲಾಖೆಗೆ ಸೇರುತ್ತವೆ ಎಂದರೆ ಸರಿ. ಸೀತಮ್ಮಪಲ್ಲಿ ಗ್ರಾಮಕ್ಕೆ ಸೇರಿದ ಸ.ನಂ.ಗಳು ನಮ್ಮ ಬಳಿ ಇಲ್ಲ. ಸಾಕ್ಷಿ ನಾನು ನಿವೃತ್ತಿ ಹೊಂದಿರುವುದರಿಂದ ನೇರವಾಗಿ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿರುವುದರಿಂದ ಕಂದಾಯ ಇಲಾಖೆಯಲ್ಲಿ ದಾಖಲೆಗಳು ಇವೆ ನಾನು ತಂದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ನಿಮ್ಮ ಅಧಿಕಾರದ ಅವಧಿಯಲ್ಲಿ ಸೀತಮ್ಮಪಲ್ಲಿ ಗ್ರಾಮಕ್ಕೆ ಸೇರಿದ ಸ.ನಂ. ದಾಖಲೆಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಅವಶ್ಯಕತೆ ಇದ್ದಾಗ ನೋಡಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಅಧಿಕಾರದ ಅವಧಿಯಲ್ಲಿ ಈ ಕೇಸಿಗೆ ಸಂಬಂಧಿಸಿದ ಸ.ನಂ.172 ಸೀತಮ್ಮಪಲ್ಲಿ ಗ್ರಾಮಕ್ಕೆ ಸೇರಿದ್ದು ಎಂದು ನಾನು ನೋಡಿದ್ದೇನೆ. ಸ.ನಂ.172 ಕ್ಕೆ ಸಂಬಂಧಿಸಿದ ಆರ್ ಟಿ ಸಿ ಮತ್ತು ಮ್ಯುಟೇಷನ್ ನೋಡಿದ್ದೇನೆ.

3. ನಿಪಿ.1 ದಾಖಲೆ 1962-63 ನೇ ಸಾಲಿನದ್ದು, ನಿಪಿ.2 ದಾಖಲೆ 1937 ರಿಂದ ಇದೆ, ನಿಪಿ.3 ದಾಖಲೆ 1994 ರಿಂದ 1998 ರವರೆಗೆ ಇರುತ್ತದೆ. ನಿಪಿ 1 ರಿಂದ 3 ರ ದಾಖಲೆಗಳಲ್ಲಿ ಸ.ನಂ.172 ಸೀತಮ್ಮಪಲ್ಲಿ ಗ್ರಾಮಕ್ಕೆ ಸೇರಿದೆ ಎಂದು ನಮೂದು ಇದೆಯಾ ಎಂದರೆ ಸಾಕ್ಷಿ ದಾಖಲೆಗಳನ್ನು ನೋಡಿ ಮುಂಗಾನಹಳ್ಳಿ ಗ್ರಾಮಕ್ಕೆ ಸೇರಿದೆ ಎಂದು ನಮೂದು ಇದೆ ಎಂದು ನುಡಿಯುತ್ತಾರೆ. ನಿಪಿ.1 ರಿಂದ 3 ರ ದಾಖಲೆಗಳು ಮುಂಗಾನಹಳ್ಳಿ ಗ್ರಾಮಕ್ಕೆ ಸೇರಿರುವ ಬಗ್ಗೆ ಸದರಿ ದಾಖಲೆಗಳನ್ನು ಓದಿಕೊಂಡಿದ್ದೀರಾ ಎಂದರೆ ಸಾಕ್ಷಿ ಸದರಿ ದಾಖಲೆ ಮುಂಗಾನಹಳ್ಳಿ ಹೋಬಳಿಗೆ ಸಂಬಂಧಿಸಿದ್ದು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದರಿಂದ ನಾನು ಓದಿಕೊಂಡಿಲ್ಲ ಎಂದು ನುಡಿಯುತ್ತಾರೆ.

4. ಸಾಕ್ಷಿಗೆ ನಿಪಿ.3(ಬಿ ಮತ್ತು ಸಿ) ಯನ್ನು ತೋರಿಸಿ ಅಲ್ಲಿ ಮುಂಗಾನಹಳ್ಳಿ ಗ್ರಾಮ ಎಂದು ಬರೆದಿದೆಯಾ ಅಥವಾ ಮುಂಗಾನಹಳ್ಳಿ ಹೋಬಳಿ ಎಂದು ಬರೆದಿದೆಯಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಅದು ಮುಂಗಾನಹಳ್ಳಿ ಹೋಬಳಿಗೆ ಸೇರಿದ್ದು ಅಲ್ಲಿ ಮುಂಗಾನಹಳ್ಳಿ ಗ್ರಾಮ ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ನಿಪಿ.1 ರಿಂದ 3 ರ ದಾಖಲೆಗಳ ಪ್ರಕಾರ ಸ.ನಂ.172 ಸೀತಮ್ಮಪಲ್ಲಿ ಗ್ರಾಮಕ್ಕೆ ಸೇರಿಲ್ಲ ಎಂದರೆ ಸಾಕ್ಷಿ ನಿಪಿ.1 ದಾಖಲೆಯನ್ನು ನೋಡಿ ಸ.ನಂ.172 ಮುಂಗಾನಹಳ್ಳಿ ಗ್ರಾಮಕ್ಕೆ ಸೇರಿದೆ ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ.

5. ಸ.ನಂ.172 ಮೂಲತಃ ಸೀತಮ್ಮಪಲ್ಲಿ ಗ್ರಾಮದ ಬಾಪುರಾವ್ ರವರಿಗೆ ಸೇರಿದೆ ಎಂದು ಸರ್ವೇ ದಾಖಲೆಗಳಲ್ಲಿ ಇರುತ್ತದೆ. ಆಕಾರ್ ಬಂದ್ ನಲ್ಲಿ ಖುಷ್ಕಿ ಜಮೀನು ಎಂದು ನಮೂದಾಗಿರುತ್ತದೆ. ನಿಪಿ.1 ರಿಂದ 3 ರ ದಾಖಲೆಗಳಲ್ಲಿ ಸ.ನಂ.172 ಬಾಪುರಾವ್ ರವರಿಗೆ ಸೇರಿದೆ ಎಂದು ಬರೆದಿಲ್ಲ. ಸ.ನಂ.172 ಬಾಪುರಾವ್ ರವರಿಗೆ ಸೇರಿದೆ ಎಂದು ಸರ್ವೇ

ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿ ಸ್ವತಃ ಅವಕಾಶ ನೀಡಿದರೆ ಆ ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಿಪಿ.1 ರಿಂದ 3 ರ ದಾಖಲೆಗಳು ತಹಸೀಲ್ದಾರ್ ರವರ ಸುಪರ್ತಿಯಲ್ಲಿ ಇರುತ್ತವೆ. ನಿಪಿ.1 ರಿಂದ 3 ರ ದಾಖಲೆಗಳಲ್ಲಿ ಟ್ಯಾಂಪರ್ ಮಾಡಬೇಕಾದರೆ ಯಾರು ಮಾಡುತ್ತಾರೆ ಎಂದರೆ ಸಾಕ್ಷಿ ಆ ದಾಖಲೆಗಳನ್ನು ಸುಪರ್ತಿಯಲ್ಲಿ ಇಟ್ಟುಕೊಳ್ಳುವ ಸಿಬ್ಬಂದಿಗೆ ಆ ವಿಚಾರ ತಿಳಿದಿರುತ್ತದೆ ಅವರನ್ನು ವಿಚಾರಣೆ ಮಾಡಬೇಕು ಎಂದು ನುಡಿಯುತ್ತಾರೆ.

6. ನಿಪಿ.1 ರಿಂದ 3 ರ ದಾಖಲೆಗಳು ಟ್ಯಾಂಪರ್ ಆಗಿದೆ ಎಂದು ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ನನಗೆ ತಿಳಿದು ಬಂತು. ವಿಚಾರ ತಿಳಿದ ಬಳಿಕ ನಾನು ಮೌಖಿಕವಾಗಿ ಸಿಬ್ಬಂದಿಯನ್ನು ವಿಚಾರಣೆ ಮಾಡಿದ್ದೇನೆ ಮತ್ತು ಅವರಿಗೆ ನೋಟೀಸ್ ಜಾರಿ ಮಾಡಿದ್ದೇನೆ. ನೋಟೀಸ್ ಜಾರಿ ಮಾಡಿದ ನಂತರ ಯಾವ ಸಿಬ್ಬಂದಿ ಏನು ಉತ್ತರ ನೀಡಿದ್ದಾರೆ ಎಂದು ನಾನು ನಿವೃತ್ತಿ ಹೊಂದಿರುವುದರಿಂದ ಕಾಲಾವಕಾಶ ನೀಡಿದರೆ ಹೇಳಬಲ್ಲೆ. ನಾನು ಮೌಖಿಕವಾಗಿ ವಿಚಾರಣೆ ಮಾಡಿದ್ದೇನೆ, ಸಿಬ್ಬಂದಿಯ ವಿಚಾರಣೆಯನ್ನು ಟ್ಯಾಂಪರ್ ಗೆ ಸಂಬಂಧಿಸಿದಂತೆ ಮಾಡಿದ್ದು ನನಗೆ ಗೊತ್ತಿಲ್ಲ.

7. ನನಗೆ ಟ್ಯಾಂಪರ್ ವಿಚಾರ ತಿಳಿದ ಬಳಿಕ ಹಿಂದೆ ಯಾವ ಹೆಸರುಗಳು ಇತ್ತು ಮತ್ತು ಯಾವ ಹೆಸರುಗಳು ಟ್ಯಾಂಪರ್ ಆಗಿದೆ ಎಂದು ವರದಿ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಸ್ವತಃ ನಿಪಿ.1 ದಾಖಲೆಯನ್ನು ನೋಡಿ ಪ್ರತಿ ಪುಟದಲ್ಲಿ ಸೌಲಭ್ಯವನ್ನು ಪಡೆದವರು ನಾಲ್ಕು ಜನರ ಹೆಸರು ಇರುತ್ತದೆ. ಒಂದು ಪುಟದಲ್ಲಿ ಮಾತ್ರ ಐದು ಜನರ ಹೆಸರು ಇರುತ್ತದೆ ಎಂದು ನುಡಿಯುತ್ತಾರೆ. ಕ್ರಮ ಸಂಖ್ಯೆ. 973 ಕ್ಕೆ ಸಂಬಂಧಿಸಿದಂತೆ ಎರಡು ಹೆಸರುಗಳು ಪುಟ ಸಂಖ್ಯೆ 64 ರಲ್ಲಿ ಐದನೇ ಹೆಸರು ಕ್ರಮ ಸಂಖ್ಯೆ 973 ಸೇರಿರುತ್ತದೆ ಎಂದು ನುಡಿಯುತ್ತಾರೆ. ಪುಟ

ಸಂಖ್ಯೆ 65 ರಲ್ಲಿಯೂ ಸಹ ಐದನೇ ಹೆಸರು ಕ್ರಮ ಸಂಖ್ಯೆ 973 ರಂತೆ ಆ ಪುಟದ ಮೊದಲಿನಲ್ಲಿ ಸೇರಿರುತ್ತದೆ ಎಂದು ನುಡಿಯುತ್ತಾರೆ.

8. ಪುಟ ಸಂಖ್ಯೆ 65 ರಲ್ಲಿ ಪೆನ್ನಿನ ಇಂಕ್ ಬದಲಾಗಿದೆ ಅಕ್ಷರಗಳು ಒಬ್ಬ ವ್ಯಕ್ತಿಯ ಹಸ್ತಾಕ್ಷರದಲ್ಲಿ ಇರುತ್ತದೆ. ಸಾಕ್ಷಿ ಸ್ವತಃ ಪುಟ ಸಂಖ್ಯೆ 64 ರಲ್ಲಿ ವ್ಯಕ್ತಿಯ ಹಸ್ತಾಕ್ಷರ ಬದಲಾಗಿರುವುದು ಕಂಡು ಬರುತ್ತದೆ ಎಂದು ನುಡಿಯುತ್ತಾರೆ. ಪುಟ ಸಂಖ್ಯೆ 65 ರಲ್ಲಿ ಕ್ರಮ ಸಂಖ್ಯೆ 973 ಆದ ನಂತರ 977 ಕ್ಕೆ ಮುಂದುವರೆದಿದೆ ಎಂದರೆ ಸರಿ. ಪುಟ ಸಂಖ್ಯೆ 65 ರಲ್ಲಿ ಕ್ರಮ ಸಂಖ್ಯೆ 974, 975, ಮತ್ತು 976 ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಪುಟ ಸಂಖ್ಯೆ 64 ರಲ್ಲಿ ಬರೆದಿರುವ ಬರವಣಿಗೆ 1962 ರಲ್ಲಿ ಬರೆಯಲಾಗಿದೆ ಎಂದರೆ ಸರಿ. ನಮ್ಮ ಕಚೇರಿಯಲ್ಲಿ ಇರುವ ದಾಖಲೆಗಳನ್ನು ತಹಸೀಲ್ದಾರ್ ರು ಮತ್ತು ಸಿಬ್ಬಂದಿ ವರ್ಗದವರು ಟ್ಯಾಂಪರ್ ಮಾಡಬೇಕು ಎಂದರೆ ಸಾಕ್ಷಿ ಸದರಿ ದಾಖಲೆಯ ಟ್ಯಾಂಪರ್ ಹಿಂದೆ ಆಗಿರುವುದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

9. ಈ ಕೇಸಿನ 2 ನೇ ಮೇಲ್ಮನವಿದಾರ ನಾಗರಾಜು ರವರ ಮಗ ಸುರೇಶ್ ನಮ್ಮ ಇಲಾಖೆಯ ಸಿಬ್ಬಂದಿ ಎಂದರೆ ಸಾಕ್ಷಿ ಆತ ಇತ್ತೀಚೆಗೆ ಗ್ರಾಮ ಸಹಾಯಕನಾಗಿ ನೇಮಕನಾಗಿದ್ದಾನೆ ಎಂದು ನುಡಿಯುತ್ತಾರೆ. 2 ನೇ ಮೇಲ್ಮನವಿದಾರ ಮಗ ಸುರೇಶ್ ನನ್ನ ಜೊತೆ ಶಾಮೀಲಾಗಿ ನಿಪಿ.1 (ಎ) , ನಿಪಿ.1(ಬಿ), ನಿಪಿ.2 (ಎ ಮತ್ತು ಬಿ) ನಿಪಿ.3 (ಎ ಯಿಂದ ಪಿ) ದಾಖಲೆಗಳನ್ನು ಟ್ಯಾಂಪರ್ ಮಾಡಿದ್ದೇವೆ ಎಂದರೆ ಸರಿಯಲ್ಲ.

10. ನಿಪಿ.3(ಎ ಯಿಂದ ಪಿ) ಎಂದು ಗುರುತಿಸಿರುವ ದಾಖಲೆಯನ್ನು ರಿಮುವರ್ ನಿಂದ ಅಳಿಸಿ ಬರೆಯಾಲಾಗಿದ್ದರಿಂದ ಅದನ್ನು ಜೆರಾಕ್ಸ್ ಮಾಡಿಸಿದರೆ ಜೆರಾಕ್ಸ್ ಪ್ರತಿಯಲ್ಲಿ

ಕಪ್ಪಾಗಿ ಗುರುತು ಕಂಡು ಬರುತ್ತದೆ ಎಂದರೆ ಸಾಕ್ಷಿ ಜೆರಾಕ್ಸ್ ಮಾಡಿಸಿ ಪರಿಶೀಲನೆ ಮಾಡಿಸಿದರೆ ಕಂಡು ಬರುತ್ತದೆ ಎಂದು ನುಡಿಯುತ್ತಾರೆ.

11. ನಿಪಿ.16 ರ ದಾಖಲೆಯನ್ನು ನಮ್ಮ ಕಚೇರಿಯಿಂದ ನಿಸಿ.3 (ಎ ಯಿಂದ ಸಿ) ಎಂದು ಟ್ಯಾಂಪರ್ ಮಾಡುವ ಮೊದಲೇ ಪಡೆದ ದಾಖಲೆ ಎಂದರೆ ಸಾಕ್ಷಿ ನಿಪಿ 16 ರ ದಾಖಲೆ 1964 ರಲ್ಲಿ ಆಗಿರುವುದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

12. ಸಾಕ್ಷಿಗೆ ನಿಪಿ 16 ರ ದಾಖಲೆ ಮತ್ತು ಇತ್ತೀಚೆಗೆ ತಹಸೀಲ್ದಾರ್ ಕಚೇರಿಯಿಂದ ಪಡೆದ ದೃಡೀಕೃತ ದಾಖಲೆಯನ್ನು ತೋರಿಸಿ ನಿಪಿ 16 ದಾಖಲೆಯನ್ನು ಟ್ಯಾಂಪರ್ ಮಾಡುವ ಮೊದಲು ಪಡೆದ ದಾಖಲೆ ಮತ್ತು ದೃಡೀಕೃತ ನಕಲನ್ನು ಟ್ಯಾಂಪರ್ ಮಾಡಿದ ನಂತರ ಕೊಟ್ಟಿರುವ ದಾಖಲೆ ಎಂದರೆ ಸಾಕ್ಷಿ 2019 ರಲ್ಲಿ ದೃಡೀಕೃತ ನಕಲನ್ನು ನೀಡಲಾಗಿದ್ದು ನನಗೆ ಆ ದಾಖಲೆಯ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. **ಸದರಿ ದೃಡೀಕೃತ ನಕಲನ್ನು ಗುರುತಿಗಾಗಿ ಮಾತ್ರ ನಿಪಿ29 ಎಂದು ಗುರುತಿಸಲಾಯಿತು.**

13. ನಿಸಿ.1 ರಿಂದ 3 ರ ದಾಖಲೆಗಳನ್ನು ಹಾಜರುಪಡಿಸುವಂತೆ ನ್ಯಾಯಾಲಯದಿಂದ ಸಮನ್ಸ್ ಹೊರಡಿಸಿದರೂ ಸಹ ಸದರಿ ದಾಖಲೆಗಳು ನಮ್ಮ ಕಚೇರಿಯಲ್ಲಿ ಲಭ್ಯವಿಲ್ಲ ಎಂದು 3 ಬಾರಿ ಹಿಂಬರಹವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇವು ಎಂದರೆ ಸರಿಯಲ್ಲ. ನಿಸಿ.1 ರಿಂದ 3 ರ ದೃಡೀಕೃತ ನಕಲುಗಳನ್ನು ನ್ಯಾಯಾಲಯಕ್ಕೆ ವಾದಿಯರು/ಎದುರುದಾರರು ಹಾಜರುಪಡಿಸಿದ ನಂತರ ನಿಸಿ.1 ರಿಂದ 3 ರ ದಾಖಲೆಗಳನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ನಿಸಿ.1 ರಿಂದ 3 ರ ದಾಖಲೆಗಳನ್ನು ಯಾರು ಟ್ಯಾಂಪರ್ ಮಾಡಿದ್ದಾರೆ ಎಂದು ನಾನು ವಿಚಾರಣೆ ಮಾಡದೇ ಕರ್ತವ್ಯ ಲೋಪ ಎಸಗಿದ್ದೇನೆ

ಎಂದರೆ ಸಾಕ್ಷಿ ಮೌಖಿಕವಾಗಿ ವಿಚಾರಣೆ ಮಾಡಿ ನೋಟೀಸ್ ನೀಡಿದ್ದೇನೆ ಎಂದು ನುಡಿಯುತ್ತಾರೆ, ನಂತರ ನಾನು ನಿವೃತ್ತ ಹೊಂದಿರುತ್ತೇನೆ ಎಂದು ನುಡಿಯುತ್ತಾರೆ. ನಿಸಿ.1 ರಿಂದ 3 ರ ಟ್ಯಾಂಪರ್ ಬಗ್ಗೆ ನಾನು ವಿಚಾರಣೆ ಮಾಡಿಲ್ಲ ಮತ್ತು ನೋಟೀಸ್ ನೀಡಿಲ್ಲ ಎಂದರೆ ಸರಿಯಲ್ಲ. 2 ನೇ ಮೇಲ್ಮನವಿ ದಾರರ ಮಗ ಸುರೇಶ್ ನಿಸಿ.1 ರಿಂದ 3 ರ ದಾಖಲೆಗಳನ್ನು ನ್ಯಾಯಾಲಯಕ್ಕೆ ಅನುಮಾನ ಬರಲಿ ಎಂದು ನನ್ನ ಜೊತೆ ಸೇರಿ ಟ್ಯಾಂಪರ್ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಯರ/ಎದುರುದಾರರ ಆಸ್ತಿಯನ್ನು ಹೊಡೆಯುವ ಉದ್ದೇಶದಿಂದ ಮೇಲ್ಮನವಿದಾರರ ಜೊತೆ ಸೇರಿಸಿಕೊಂಡುನಿಸಿ.1 ರಿಂದ 3 ರ ದಾಖಲೆಗಳನ್ನು ನಾನು ಟ್ಯಾಂಪರ್ ಮಾಡಿದ್ದೇನೆ ಎಂದರೆ ಸರಿಯಲ್ಲ. ಮೇಲ್ಮನವಿದಾರರ ಮಾತನ್ನು ಕೇಳಿ ಸುಳ್ಳು ಸಾಕ್ಷಿಯನ್ನು ಅವರ ಪರವಾಗಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲಃ</u>**

ಈ ಹಂತದಲ್ಲಿ ಮೇಲ್ಮನವಿದಾರ ಪರ ವಕೀಲರಾದ ಶ್ರೀ.ಜಿಎಂಐ ವಕೀಲರು ಸ.ನಂ.172 ಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಸರ್ವೇ ಅಧಿಕಾರಿಗಳಿಂದ ಯಾವ ದಾಖಲೆಗಳನ್ನು ಪಡೆದಿದ್ದೀರಾ ಎಂಬ ಪ್ರಶ್ನೇಯನ್ನು ಕೇಳಲು ನ್ಯಾಯಾಲಯದ ಅನುಮತಿಯನ್ನು ಕೋರಿದ್ದು ಎದುರುದಾರರ ಪರ ವಕೀಲರಾದ ಶ್ರೀ.ಟಿ.ಎನ್.ಎಸ್ ವಕೀಲರು ಸದರಿ ಪ್ರಶ್ನೇಗೆ ತಮ್ಮ ಆಕ್ಷೇಪಣೆ ವ್ಯಕ್ತಪಡಿಸಿದ್ದು ಸಾಕ್ಷಿ ಈ ಮೇಲೆ ಸ.ನಂ.172 ರ ತಾಲ್ಲೂಕು ಸರ್ವೇ ಅಧಿಕಾರಿಗಳಿಂದ ಪಡೆದ ದಾಖಲೆಯನ್ನು ಹಾಜರುಪಡಿಸಿಲ್ಲ ಮತ್ತು ಅವಕಾಶ ನೀಡಿದರೆ ಹಾಜರುಪಡಿಸುತ್ತೇನೆ ಎಂದು ಮೇಲೆ ಹೇಳಿದ್ದರಿಂದ ಪ್ರಶ್ನೇಗೆ ಅನುಮತಿ ನೀಡಲಾಯಿತು.

ಸಾಕ್ಷಿ ಮೇಲ್ಮನವಿ ದಾರರ ವಕೀಲರ ಪ್ರಶ್ನೇಗೆ ಎಡಿಎಲ್ಆರ್ ರವರಿಂದ ಸ.ನಂ.172 ಕ್ಕೆ ಸಂಬಂಧಿಸಿದ ಆಕಾರ್ ಬಂದ್ ಮತ್ತು ಅಟ್ಲಾಸ್ ಪಡೆದಿದ್ದೇನೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಶ್ರೀ ಟಿಎನ್‌ಎಸ್ ವಕೀಲರಿಂದಃ**

ಆಕಾರ್ ಬಂದ್ ಮತ್ತು ಅಟ್ಲಾಸ್ ದಾಖಲೆಗಳನ್ನು ಎಡಿಎಲ್‌ಆರ್ ರವರಿಂದ ನ್ಯಾಯಾಲಯಕ್ಕೆ ಮಾಹಿತಿಯನ್ನು ನೀಡುವಾಗ ನಮ್ಮ ಕಚೇರಿಯವರು ಪಡೆದಿದ್ದಾರೆ, ಆ ದಾಖಲೆಯನ್ನು ನಾನು ನೋಡಿದ್ದೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಮೊದಲು ಸಾಕ್ಷಿ ಹೇಳಲು ಬಂದ ನಂತರ ಪಡೆದಿದ್ದಾರೆ. ನಾನು ಸದರಿ ದಾಖಲೆಗಳನ್ನು ಇದೇ ದಿನ ನೋಡಿ ಬಂದಿದ್ದೇನೆ. ನಾನು ಈ ದಿನ ಕಚೇರಿಗೆ ಹೋಗಿ ಸದರಿ ದಾಖಲೆಗಳನ್ನು ನೋಡಿ ಬಂದಿದ್ದೇನೆ. ಸದರಿ ದಾಖಲೆಗಳನ್ನು ಎಡಿಎಲ್‌ಆರ್ ಕಚೇರಿಯಿಂದ ನ್ಯಾಯಾಲಯಕ್ಕೆ ಅಗತ್ಯ ಇರುವುದರಿಂದ ತಹಸೀಲ್ದಾರ್ ಕಚೇರಿಯ ಶಿರಸ್ತೇದಾರ್ ತರಸಿರುತ್ತಾರೆ. ಸದರಿ ದಾಖಲೆಗಳು ನ್ಯಾಯಾಲಯಕ್ಕೆ ಅಗತ್ಯ ಇದೆ ಎಂದು ತಿಳಿದಿದ್ದರೂ ನ್ಯಾಯಾಲಯಕ್ಕೆ ಯಾವ ಕಾರಣಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಈಗ ಇರುವ ತಹಸೀಲ್ದಾರ್ ರವರ ಮೂಲಕ ಸದರಿದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸ ಬೇಕಾಗಿರುವುದರಿಂದ ಮತ್ತು ಸದರಿ ತಹಸೀಲ್ದಾರ್ ರವರು ಕರ್ತವ್ಯದ ನಿಮಿತ್ತ ಬೇರೆ ಕಡೆ ಹೋಗಿದ್ದರಿಂದ ನ್ಯಾಯಾಲಯಕ್ಕೆ ಸಲ್ಲಿಸಲಿಲ್ಲ ಎಂದು ನುಡಿಯುತ್ತಾರೆ. ಸ.ನಂ.172 ಸೀತಮ್ಮಪಲ್ಲಿ ಗ್ರಾಮಕ್ಕೆ ಸೇರಿದೆ ಎಂದು ತೋರಿಸಲು ಯಾವುದೇ ಸರ್ವೇ ದಾಖಲೆಗಳು ಇಲ್ಲದ ಕಾರಣ ನಾನು ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ನ್ಯಾಯಾಲಯದ ಪ್ರಶ್ನೆಃ ಮಜರ ಗ್ರಾಮ ಎಂದರೆ ಏನು?**

**ಉಃ** ಮಜರ ಗ್ರಾಮ ಎಂದರೆ ಆ ಗ್ರಾಮದಲ್ಲಿ ಜನರು ವಾಸಿಸುವುದಿಲ್ಲ, ಜಮೀನುಗಳು ಇರುತ್ತವೆ ಮತ್ತು ಜನಗಳು ಇದ್ದರೂ ಆ ಗ್ರಾಮದಿಂದ ವಲಸೆ ಹೋಗಿರುತ್ತಾರೆ. ಮಜರ ಗ್ರಾಮಕ್ಕೆ ಸೇರಿದ ಜಮೀನುಗಳು ಪಕ್ಕದ ಗ್ರಾಮಕ್ಕೆ ಹೋಗಿರುತ್ತವೆ.

**ಮರುವಿಚಾರಣೆ ಇಲ್ಲಃ**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ